ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಹೇಳಿದ ಪ್ರಕಾರ, ಇದು ೨೨-೪-೮೫ ರಂದು ಆಗಿದೆಯೆಂದು ತಿಳಿದುಬರುತ್ತಿದೆ ನಮಗೆ ತಿಳಿದ ಮಟ್ಟಿಗೆ ಇದು ೨೧ನೇ ತಾರೀಖೇ ನಡೆದಿದೆ. ಜಗಳವಾದ ಮೇಲೆ ಕಂಪ್ಲೇಂಟ್ ಕೊಡಲಿಕ್ಕೆ ಪೋಲೀಸ್ ಸ್ಟೇಷನ್ನಿಗೆ ಅವರು ಹೋದಾಗ ಹೆಡ್ ಕಾನ್ಸ್ ಟೇಬಲ್ ಮತ್ತು ಸಬ್ ಇನ್ಸ್‌ಪೆಕ್ಟರ್‌ರವರು ಕೇಸ್‌ನ್ನು ರಿಜಿಸ್ಟರ್ ಮಾಡಿಕೊಳ್ಳಲಿಲ್ಲವೆಂದು ತಿಳಿದು ಬಂದಿದೆ. ಈ ಜಗಳ ಯಾದ್‌ಗಿರ್‌ನಲ್ಲಿ ನಡೆದಿದೆ. ಕೇಸ್ ರಿಜಿಸ್ಟರ್ ಆಗದಿರುವುದಕ್ಕೆ ಪೊಲಿಟಿಕಲ್ ಪ್ರೆಷರ್ ಬಿದ್ದಿದೆ. ಅಲ್ಲಿನ ಶಾಸಕರು ಮತ್ತು ಡಿ ವೈ. ಎಸ್. ಪಿ. ಯವರು ಇದರಲ್ಲಿ ಇಂಟರ್‌ವೀನ್ ಆಗಿದ್ದಾರೆ. ನಂತರ ಕೇಸ್ ರಿಜಿಸ್ಟರ್ ಆಗಿದೆ. ಕೇಸ್ ರಿಜಿಸ್ಟರ್ ಯಾವ ತಾರೀಖಿಗೆ ಆಗಿದೆ ಎಂಬುದು ನಮಗೆ ಬೇಕಾಗಿದೆ.

ಶ್ರೀ ಬಿ. ರಾಚಯ್ಯ.— ೨೧ನೇ ತಾರೀಖು ಸಾಯಂಕಾಲ ಕೇಸ್ ರಿಜಿಸ್ಟರ್ ಮಾಡಿಕೊಂಡಿದ್ದಾರೆ.

ಅಧ್ಯಕ್ಷರು.—೮೮೭. ರ ಮಾನ್ಯ ಸದಸ್ಯರಾದ ಶ್ರೀ ಆರ್. ಎನ್. ನಾಯ್ಕರವರು ಸದನದಲ್ಲಿ ಹಾಜರಿಲ್ಲ.

೮೭೧. ಸಂಬಂಧಪಟ್ಟ ಸಚಿವರು ಸದನದಲ್ಲಿ ಹಾಜರಿರಲಿಲ್ಲ.

೮೭೯. ರ ಮಾನ್ಯ ಸದಸ್ಯರಾದ ಶ್ರೀ ಜಿ. ಎಸ್. ಬಾಗಲಕೋಟ್‌ರವರು ಸದನದಲ್ಲಿ ಹಾಜರಿಲ್ಲ.

ಗೋಕಾಕ್ ಮಿಲ್ಲಿನ ಕಾರ್ಮಿಕರಿಗೆ ಗೂಂಡಾಗಳಿಂದ ಕಿರುಕುಳ

೮೧೧. ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).— ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಗೋಕಾಕ್ ಮಿಲ್‌ನ ಕಾರ್ಮಿಕರಿಗೆ ಗುಂಡಾಗಳಿಂದ ಕಿರುಕುಳವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಗುಂಡಾಗಿರಿಯನ್ನು ಹತ್ತಿಕ್ಕಲು ಕ್ರಮ ಕೈಗೊಳ್ಳುವರೇ ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು) —

ಅ) ಗೋಕಾಕ್ ಮಿಲ್ ಕಾರ್ಮಿಕರಿಗೆ ಗುಂಡಾಗಳಿಂದ ಕಿರುಕುಳ ಕೊಟ್ಟ ಬಗ್ಗೆ ಯಾವುದೇ ಪ್ರಕರಣವು ವರದಿಯಾಗಿರುವುದಿಲ್ಲ.

ಆ) ಆದಾಗ್ಯೂ ಸ್ಥಳೀಯ ಪೋಲೀಸರಿಗೆ ಗೋಕಾಕ್ ಮಿಲ್ ಕಾರ್ಮಿಕರ ಮೇಲೆ ದೌರ್ಜನ್ಯಗಳು ನಡೆಯದಂತೆ ಕಾನೂನು ಪ್ರಕಾರ ರಕ್ಷಣೆ ನೀಡಲು ಆದೇಶ ನೀಡಲಾಗಿದೆ.

ಶ್ರೀ ಎಂ. ಮುತ್ತಣ್ಣನವರ್. — ಅಧ್ಯಕ್ಷರೇ, ಈಗಾಗಲೇ ಗೋಕಾಕ್ ಮಿಲ್ ಕಾರ್ಮಿಕರ ಮೇಲೆ ಕಬ್ಬಿಣ ಸಲಾಖೆಗಳಿಂದ ಹೊಡೆಯುತ್ತಿದ್ದಾರೆ. ಇದರ ಬಗ್ಗೆ ಯೋಗ್ಯ ಕ್ರಮ ಕೈಗೊಳ್ಳಬೇಕೆಂದು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ. — ನಾನು ಈಗಾಗಲೇ ತಿಳಿಸಿದ್ದೇನೆ. ಅವರ ಮೇಲೆ ಯಾವುದೇ ದೌರ್ಜನ್ಯ ಆಗದಂತೆ ರಕ್ಷಣೆ ಕೊಟ್ಟಿದ್ದೇವೆ.

ಚಿಕ್ಕೋಡಿಯಲ್ಲಿ ಸರಕಾರಿ ಆಸ್ಪತ್ರೆ

೮೭೫. ಶ್ರೀಮತಿ ಶಕುಂತಲಾ ಟಿ. ಚೌಗಲೆ (ಚಿಕ್ಕೋಡಿ).— ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಚಿಕ್ಕೋಡಿಯಲ್ಲಿನ ಸರ್ಕಾರಿ ಆಸ್ಪತ್ರೆಯನ್ನು ಯಾವ ದಿನಾಂಕದಿಂದ ಸರ್ಕಾರದವರು ತಾಲ್ಲೂಕು ಅಭಿವೃದ್ಧಿ ಮಂಡಲಿಯಿಂದ ವಹಿಸಿಕೊಂಡಿದೆ.

ಅ) ಈ ಆಸ್ಪತ್ರೆಗೆ ಮಂಜೂರಾದ ಸಿಬ್ಬಂದಿ ವರ್ಗ ಹಾಗೂ ಪ್ರಸಕ್ತ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗದವರ ಮತ್ತು ಈ ಆಸ್ಪತ್ರೆಗೆ ಮಂಜೂರಾದ ಹಾಸಿಗೆಗಳು ಎಷ್ಟು ? ಹಿಂದಿನ ಮೂರು ವರ್ಷಗಳಲ್ಲಿ ಪ್ರತಿದಿನ ಸರಾಸರಿ ಒಳರೋಗಿಗಳ ಸಂಖ್ಯೆ ಎಷ್ಟು ಮತ್ತು ಅಲ್ಲಿಯ ಬೇಡಿಕೆ ಪ್ರಕಾರ ಔಷಧಿ ಪೂರೈಸಲಾಗಿದೆಯೆ ?

ಇ) ಈ ಆಸ್ಪತ್ರೆಯು ಒಟ್ಟಾರೆ ಅಭಿವೃದ್ಧಿಗೆ ಸರ್ಕಾರದವರು ಯಾವುದೇ ಯೋಜನೆಯನ್ನು ರೂಪಿಸಿದ್ದಾರೆಯೆ ?

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ೩೧-೭-೧೯೮೧

ಆ) ಮಂಜೂರಾದ ಹಾಸಿಗೆಗಳ ಸಂಖ್ಯೆ ೧೩

ಸಿಬ್ಬಂದಿ ವಿವರ

ಹುದ್ದೆಗಳು	ಮಂಜೂರಾದ ಸಂಖ್ಯೆ	ಕೆಲಸ ನಿರ್ವಹಿಸುತ್ತಿರುವವರ ಸಂಖ್ಯೆ	ಖಾಲಿ ಹುದ್ದೆ
೧. ವೈದ್ಯಾಧಿಕಾರಿಗಳು	೧	೧	—
೨. ಮಹಿಳಾ ವೈದ್ಯಾಧಿಕಾರಿಗಳು	೧	೧	—
೩. ಔಷಧಿ ವಿತರಣಕಾರರು	೧	೧	—
೪. ಎ. ಎನ್. ಎಮ್	೨	೨	—
೫. ಆಟೆಂಡರ್ಸ್	೩	೩	—
೬. ಆಯಾ	೨	೨	—

(ಖಾಲಿ ಹುದ್ದೆಗಳು ಇರುವುದಿಲ್ಲ)

ಹಿಂದಿನ ೩ ವರ್ಷಗಳ ಸರಾಸರಿ ಒಳರೋಗಿಗಳ ಸಂಖ್ಯೆ—೪ ೧೯೮೪-೮೫ನೇ ಸಾಲಿನಲ್ಲಿ ಈ ಆಸ್ಪತ್ರೆಗೆ ೮,೫೪೪-೦೦ ರೂ. ಮೌಲ್ಯದ ಔಷಧಿಗಳನ್ನು ಸರಬರಾಜು ಮಾಡಲಾಯಿತು.

ಇ) ಹಾದು. ಚಿಕ್ಕೋಡಿಯಲ್ಲಿರುವ ಆಸ್ಪತ್ರೆಯು ಉಪವಿಭಾಗ ಮಟ್ಟದಲ್ಲಿ ಇರುವ ಕಾರಣ ಈ ಆಸ್ಪತ್ರೆಯನ್ನು ಸರ್ಕಾರಿ ಆಜ್ಞೆ ಸಂಖ್ಯೆ. ಎಚ್, ಎಫ್. ಡಬ್ಲ್ಯೂ ೩೮ ಸಿ.ಜಿ.ಎಂ. ೮೫, ದಿನಾಂಕ ೧೮-೮-೮೫ರಲ್ಲಿ ೫೦ ಹಾಸಿಗೆಗಳ ಜನರಲ್ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಯಿತು.

ಶ್ರೀಮತಿ ಶಕುಂತಲಾ ಟಿ. ಚೌಗುಲೆ.— ಅಧ್ಯಕ್ಷರೇ, ಮೊದಲನೆಯದಾಗಿ, ನಮ್ಮ ಚಿಕ್ಕೋಡಿ ತಾಲ್ಲೂಕಿನ ಒಂದು ಮೆಟರ್‌ನಿಟಿ ಹೋಂ ಇದೆ. ಅದನ್ನು ಸರ್ಕಾರದವರು ವಹಿಸಿಕೊಂಡು ಮೆಟರ್‌ನಿಟಿ ಹಾಸ್ಪೆಟಲ್ ಆಗಿ ಪರಿವರ್ತಿಸಂತ್ತಿದ್ದಾರೆ. ಈಗಿರುವ ಮೆಟರ್‌ನಿಟಿ ಹೋಂ ಕೊಂಡವಾಡಕ್ಕಿಂತ ಕಡೆಯಾಗಿದೆ. ಆದುದರಿಂದ ಈ ಮೆಟರ್‌ನಿಟಿ ಹೊ.ನ್ನು ಮೆಟರ್‌ನಿಟಿ ಹಾಸ್ಪೆಟಲ್ ಆಗಿ ಪರಿವರ್ತಿಸುವ ಬದಲಾಗಿ ಬೇರೆಯೆ ಸ್ಥಳದಲ್ಲಿ ಆಸ್ಪತ್ರೆಯನ್ನು ಆದಷ್ಟು ಜಾಗ್ರತೆ ನಿರ್ಮಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.— ಚಿಕ್ಕೋಡಿ ತಾಲ್ಲೂಕಿನಲ್ಲಿ ೫೦ ಹಾಸಿಗೆಗಳುಳ್ಳ ಒಂದು ಮೆಟರ್‌ನಿಟಿ ಹಾಸ್ಪಿಟಲನ್ನು ನಿರ್ಮಿಸಬೇಕೆಂದು ಇದ್ದೇವೆ, ಅದನ್ನು ಆದಷ್ಟು ಬೇಗ ಮಾಡುತ್ತೇವೆ.